# ಹಾಸನ ಜಿಲ್ಲಾ ದಂಡಾಧಿಕಾರಿಗಳ ನಡವಳಿಕೆಗಳು

ಸಂಖ್ಯೆ: ಎಂಎಜಿ 517:94-95.    ದಿನಾಂಕ 9-12-1994.

ವಿಷಯ:- ದಿನಾಂಕ 9-12-94ರಂದು ಮತ ಎಣಿಕೆ ನಡೆಯುವುದರ ಪರಿಣಾಮವಾಗಿ ಶಾಂತಿಭಂಗವಾಗದಂತೆ ಮುನ್ನೆಚ್ಚರಿಕೆ ಕ್ರಮವಾಗಿ ನಿಷೇದಾಜ್ಞೆ ಜಾರಿಗೊಳಿಸುವುದು.

ಉಲ್ಲೇಖ:- ಹಾಸನ ಜಿಲ್ಲಾ ಪೋಲೀಸ ಅಧೀಕ್ಷಕರ ಪತ್ರ ಕ್ರಮಾಂಕ ಡಿಎಸ್‌ಬಿ ಜಿ15(ಎ) 94 ದಿನಾಂಕ 8-12-94.

---

**ಪ್ರಸ್ತಾವನೆ:**

1994ರ ಕರ್ನಾಟಕ ವಿಧಾನಸಭಾ ಸಾರ್ವತ್ರಿಕ ಚುನಾವಣೆಗಳ ಮತಎಣಿಕೆಯು ದಿನಾಂಕ 9-12-94ರಂದು ನಡೆಯುತ್ತಿದೆ. ಈ ಮತ ಎಣಿಕೆ ನಂತರ ವಿಜಯಿ ಅಭ್ಯರ್ಥಿಯ ಪರ ವಿಜಯೋತ್ಸವ ಮೆರವಣಿಗೆಯಾದಲ್ಲಿ ಸದರಿ ಸ್ಥಾನಗಳಿಗೆ ಪ್ರಬಲ ಪೈಪೋಟಿ ಇರುವುದರಿಂದ ಸೋತ ಅಭ್ಯರ್ಥಿಗಳ ಪರ ಬೆಂಬಲಿಗರು ಇದಕ್ಕೆ ಉಂಟುಮಾಡುವ ಮತ್ತು ತನ್ಮೂಲಕ ಹಿಂಸಾಚಾರಕ್ಕೆ ಅವಕಾಶ ಆಗುವುದಾಗಿ ಉಲ್ಲೇಖಿತ ಪತ್ರದಲ್ಲಿ ವರದಿ ಬಂದಿರುತ್ತದೆ. ಇದನ್ನು ತಡೆಯಲು ಮುನ್ನೆಚ್ಚರಿಕೆ ಕ್ರಮವಾಗಿ ಎಲ್ಲಾ ಸಭೆ ಮತ್ತು ಮೆರವಣಿಗೆಗಳನ್ನು ನಿಷೇಧಿಸಿ ಆಜ್ಞೆ ಹೊರಡಿಸಲು ಸಹ ಉಲ್ಲೇಖಿತ ಪತ್ರದಲ್ಲಿ ಕೋರಲಾಗಿದೆ.

ದಿನಾಂಕ 9-12-94ರಂದು ನಡೆಯುತ್ತಿರುವ ಮತಗಳ ಎಣಿಕೆ ನಡೆಯುತ್ತಿದ್ದು ವಿಧಾನಸಭಾ ಸದಸ್ಯರ ಸ್ಥಾನಗಳಿಗೆ ತೀವ್ರ ಪೈಪೋಟಿ ಇರುವ ಹಿನ್ನೆಲೆಯಲ್ಲಿ ಶಾಂತಿ ಕದಡುವ ಸಂಭವ ಇರುವುದನ್ನು ಮನಗಂಡಿರುತ್ತೇ. ಅಹಿತಕರ ಘಟನೆ ನಡೆಯದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ಸಭೆ ಮತ್ತು ಮೆರವಣಿಗೆಗಳನ್ನು ನಿಷೇಧಿಸುವುದರ ಅವಶ್ಯಕತೆ ಇರುವುದನ್ನು ಸಹ ಮನಗಂಡಿರುತ್ತೇ. ಆದುದರಿಂದ ಈ ಆದೇಶ ಹೊರಡಿಸಿರುತ್ತೇ.

## ಆ ದೇ ಶ

ಹಾಸನ ಜಿಲ್ಲೆಯ ಜಿಲ್ಲಾ ದಂಡಾಧಿಕಾರಿ ಮಹೇಂದ್ರ ಜೈನ್, ಐ.ಎ.ಎಸ್., ಆದ ನಾನು ಹಾಸನ ಜಿಲ್ಲಾದ್ಯಂತ ದಿನಾಂಕ 9-12-94ರ ಮಧ್ಯಾಹ್ನ 12-00 ಗಂಟೆಯಿಂದ ದಿನಾಂಕ 11-12-94ರ ಮಧ್ಯ ರಾತ್ರಿ 12-00 ಗಂಟೆವರೆಗೆ ಎಲ್ಲಾ ಸಭೆ ಮತ್ತು ಮೆರವಣಿಗೆಗಳನ್ನು ನಿಷೇಧಿಸಿರುತ್ತೇನೆ. ಅದೇ ರೀತಿ ಮಾರಕ ಆಯುಧಗಳನ್ನು ಮತ್ತು ಸ್ಫೋಟಕ ವಸ್ತುಗಳನ್ನು ಹಿಡಿದುಕೊಂಡು ಓಡಾಡುವುದು ಮತ್ತು 5 ಜನ ಅದಕ್ಕಿಂತ ಹೆಚ್ಚು ಒಟ್ಟಿಗೆ ಸೇರುವುದು ಇವುಗಳನ್ನು ನಿಷೇಧಿಸಿದೆ. ಮತಗಳ ಎಣಿಕೆ ಕೇಂದ್ರದ ಸುತ್ತ 250 ಮೀಟರ್ ವ್ಯಾಪ್ತಿಯೊಳಗಡೆ ಈ ಆದೇಶಕ್ಕೆ ವಿನಾಯ್ತಿ ನೀಡಲಾಗಿದೆ. ಅದೇ ರೀತಿ ಈ ನಿಷೇದಾಜ್ಞೆಯು ಪೂಜೆ ಮತ್ತು ಪ್ರಾರ್ಥನಾ ಸ್ಥಳಗಳಿಗೆ ಹೋಗುವ ಮತ್ತು ಶವಸಂಸ್ಕಾರಗಳಿಗೆ ಅನ್ವಯಿಸುವುದಿಲ್ಲ. ದಂಡ ಪ್ರಕ್ರಿಯಾ ಸಂಹಿತೆಯ 144ನೇ ವಿಧಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಆದೇಶವನ್ನು ಹೊರಡಿಸಲಾಗಿದೆ.

(ಮಹೇಂದ್ರ ಜೈನ್)
ಜಿಲ್ಲಾ ದಂಡಾಧಿಕಾರಿಗಳು,
ಹಾಸನ ಜಿಲ್ಲೆ, ಹಾಸನ.

1) ಆರಕ್ಷಕ ಅಧೀಕ್ಷಕರು, ಹಾಸನರವರಿಗೆ ವ್ಯಾಪಕ ಪ್ರಚಾರ ಹಾಗೂ ಸೂಕ್ತ ಕ್ರಮಕ್ಕಾಗಿ.
2) ಜಿಲ್ಲೆಯ ಎಲ್ಲಾ ಉಪ ವಿಭಾಗಾಧಿಕಾರಿಗಳು ಹಾಗೂ ತಹಸೀಲ್ದಾರರವರಿಗೆ ತಿಳುವಳಿಕೆ ಹಾಗೂ ಸೂಕ್ತ ಕ್ರಮಕ್ಕೆ.
3) ಜಿಲ್ಲಾ ವಾರ್ತಾ ಮತ್ತು ಪ್ರಚಾರಾಧಿಕಾರಿಗಳು, ಹಾಸನರವರಿಗೆ ಸೂಕ್ತ ಕ್ರಮಕ್ಕೆ.

**ಪ್ರತಿಯನ್ನು:-**

1) ಮುಖ್ಯ ಚುನಾವಣಾಧಿಕಾರಿಗಳು, ಬೆಂಗಳೂರುರವರ ಅವಗಾಹನೆಗೆ ಮಂಡಿಸಿದೆ.
2) ಪ್ರಧಾನ ಕಾರ್ಯದರ್ಶಿಗಳು, ಒಳಾಡಳಿತ ಇಲಾಖೆ, ವಿಧಾನಸೌಧ, ಕರ್ನಾಟಕ ಸರ್ಕಾರ, ಬೆಂಗಳೂರು-560 001 ರವರ ಅವಗಾಹನೆಗೆ ಮಂಡಿಸಿದೆ.